ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,ಹೊಸ ಸಾರ್ವಜನಿಕ ಪೂರಕ ಕಟ್ಟಡ,
ನೃಪತುಂಗ ರಸ್ತೆ,ಬೆಂಗಳೂರು-560001

ಸಂಖ್ಯೆ :-ಆರ್.ಎಮ್.ಎಸ್.ಎ/ಆವಿ/ಸಿ.ಎ.ಸಿ/01/2012-13

ದಿನಾಂಕ:-22-08-2012

ಗೆ,
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
------------ಜಿಲ್ಲೆ

ಮಾನ್ಯರೇ,

ವಿಷಯ:- ಆದರ್ಶ ವಿದ್ಯಾಲಯಗಳ 6 ನೇ 7 ನೇ ಮತ್ತು 8 ನೇ ತರಗತಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳಲು ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ:- ಆರ್.ಎಂ.ಎಸ್.ಎ/ಆವಿ/ಸಿ.ಎ.ಸಿ/05/2011-12 ದಿನಾಂಕ 12-06-2012 ಮತ್ತು 03-07-2012.

2012-13ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯ ಗಳಲ್ಲಿ 6ನೇ ತರಗತಿಗೆ ವಿದ್ಯಾರ್ಥಿಗಳ ದಾಖಲಾತಿ ಸಂಬಂಧ ಆಯ್ಕೆ ಪರೀಕ್ಷೆ ನಡೆಸಿ 80 ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ನೀಡಿ ದಾಖಲಾತಿ ಮಾಡಿಕೊಳ್ಳಲು ತಿಳಿಸಲಾಗಿತ್ತು. ನಿಗದಿತ ಸಂಖ್ಯೆಯಲ್ಲಿ ಮಕ್ಕಳು ದಾಖಲಾಗದ ಹಿನ್ನೆಲೆಯಲ್ಲಿ ಉಲ್ಲೇಖದಲ್ಲಿನ ಪತ್ರದಲ್ಲಿ ದಿನಾಂಕ 31-07-2012ರ ವರೆಗೆ ದಾಖಲಾತಿ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ ಕೆಲವು ಆದರ್ಶ ವಿದ್ಯಾಲಯಗಳಲ್ಲಿ ಇನ್ನೂ ನಿಗದಿತ ಸಂಖ್ಯೆಯಲ್ಲಿ ದಾಖಲಾತಿ ಆಗದೇ ಸೀಟುಗಳು ಖಾಲಿ ಇರುವುದರಿಂದ ಸಮಯ ವಿಸ್ತರಿಸುವಂತೆ ಬೇಡಿಕೆ ಬರುತ್ತಿದೆ.

ಆದ್ದರಿಂದ ನಿಗದಿತ 80 ಸೀಟುಗಳಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ಸಿ.ಎ.ಸಿಯಿಂದ ನೀಡಲಾಗಿರುವ ಎಲಿಜಿಬಿಲಿಟಿ ಪಟ್ಟಿಯಲ್ಲಿನ ಆಯಾ ಕೆಟಗರಿಯಲ್ಲಿ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗೆ ಮೊದಲು ಅವಕಾಶ ನೀಡುವುದು. ಒಂದು ವೇಳೆ ಆ ವಿದ್ಯಾರ್ಥಿಯು ಬಾರದಿದ್ದಲ್ಲಿ ನಂತರದ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು. ಈ ರೀತಿ ಮುಂದುವರೆಸಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲು ಅನುಮತಿ ನೀಡಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ

(ರಾಜ್ಯ ಯೋಜನಾ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು.